**CC No 43/2022**
**PW.10**

**ಸಾಕ್ಷಿಗೆ ದಿನಾಂಕ 18.03.2024 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ದಿಃ 30.04.2017 ರಂದು ಛತ್ರದಲ್ಲಿ ಚಾಸಾ-2 ರವರು ಆರೋಪಿ-1 ರವರಿಗೆ ಒಡವೆಗಳನ್ನು ಕೊಟ್ಟಿರುತ್ತಾರೆ. ಆ ದಿನ ನಾನು ಹಾಜರಿದ್ದೆ. ಸದರಿ ವಿಷಯವನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಒಡವೆಗಳು ಎಷ್ಟು ಗ್ರಾಂ ತೂಕದ್ದಾಗಿದ್ದವು ಎಂದು ವಿವರವಾಗಿ ಹೇಳಲಾಗುವುದಿಲ್ಲ. 2020 ರಲ್ಲಿ ಆರೋಪಿ ಯಾವ ದಿನಾಂಕ ಗಲಾಟೆ ಮಾಡಿರ ತ್ತಾರೆಂದು ಹೇಳಲಾಗುವುದಿಲ್ಲ. ಗಲಾಟೆ ಆಗಿರುವುದನ್ನು ನಾನು ನೋಡಿರುತ್ತೇನೆ. ಸದರಿ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಇದೇ ಮೊದಲು ಸದರಿ ವಿಷಯವನ್ನು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಯಾವಾಗ ದೂರು ಕೊಟ್ಟಿರುತ್ತಾರೆಂದು ದಿನಾಂಕ ನೆನಪಿಲ್ಲ. ಚಾಸಾ-2 ರವರು ರವಿಕುಮಾರ್ ರವರಿಗೆ ರೂ. 18,00,000/-ಕ್ಕೆ ಮಾರಾಟ ಮಾಡಿದ್ದು, ರೂ. 5,00,000/- ಹಣವನ್ನು ಮುಂಗಡವಾಗಿ ನೀಡಿರುತ್ತಾರೆ. ಸದರಿ ಕರಾರು ಪತ್ರವನ್ನು ನಾನು ನೋಡಿರುತ್ತೇನೆ. ನಾನು ಸಹಿ ಮಾಡಿರುವುದಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ಸದರಿ ವಿಷಯವನ್ನು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರವಿಕುಮಾರ್ ರವರಿಗೆ ಯಾವುದೇ ಕ್ರಯಪತ್ರವಾಗದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ದಿನಾಂಕ ಹೇಳಿಕೆ ಕೊಟ್ಟಿರುತ್ತೇನೆ ಎಂದು ನೆನಪಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಷಯಗಳನ್ನು ಓದಿ ಹೇಳಿರುವುದಿಲ್ಲ. ಸದರಿ ವಿಚಾರವಾಗಿ ನಾನು ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**